ಆ) ಶಿವಮೊಗ್ಗ ನಗರದ ಸರ್ಕಾರಿ ಮೆಗ್ಗಾನ್ ಆಸ್ಪತ್ರೆಯ ನವೀಕರಣ ಹಾಗೂ ವಿಸ್ತರಣೆಯ ಕಾಮಗಾರಿಗೆ ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಿಂದ ಇದುವರೆವಿಗೆ ವ್ಯಯಿಸಲಾದ ಮೊತ್ತ ರೂ. 801.50 ಲಕ್ಷಗಳು

ಡಯಾಲಿಸಿಸ್ ಸೌಲಭ್ಯ ಮತ್ತು ಐ.ಸಿ.ಸಿ.ಯು ತೀವ್ರ ಹೃದಯ ನಿಗಾ ಘಟಕವನ್ನು ಈ ಆಸ್ಪತ್ರೆಗೆ ಹೊಸದಾಗಿ ಪ್ರಾರಂಭಿಸಲಾಗುವುದು.

ಇ) ಹೌದು. ಮಾಡಲಾಗಿದೆ. ಎಫ್.ಎಂ. ಮೈಕ್ರೊಬಯಾಲಜಿ ಬಯೋಕೆಮಿಸ್ಟ್ರಿ ತಜ್ಞ ಅಭ್ಯರ್ಥಿಗಳ ಕೊರತೆಯಿರುವುದರಿಂದ ಈ ನಾಲ್ಕು ತಜ್ಞ ಹುದ್ದೆಗಳನ್ನು ಭರ್ತಿ ಮಾಡಲಾಗಿಲ್ಲ.

ಈ) ಇಲ್ಲಾ.

ರಾಷ್ಟ್ರೀಯ ಮಾನವ ಹಕ್ಕು ಕಾಯ್ದೆ ಸಮಿತಿಯ ಶಿಫಾರಸ್ಸಿನಂತೆ ಮತ್ತು ಶ್ರೀ ಸಂಜಯ ಕೌಲ್, ಆಯುಕ್ತರು ಇವರ ಸಮಿತಿಯ ಶಿಪಾರಸ್ಸಿನಂತೆ ಐ.ವಿ. ದ್ರಾವಣಗಳ ತಯಾರಿಸುವ ಕ್ರಮವನ್ನು ಕೈಬಿಡಲಾಗಿದೆ.

ಶಿವಮೊಗ್ಗ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಗ್ರಂಥಾಲಯ ಯೋಜನೆ

3526(3338) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ 1999ರಿಂದ ಈ ಸಾಲಿನವರೆಗೆ ವಿವಿಧ ಯೋಜನೆಗಳಡಿಯಲ್ಲಿ ಮಂಜೂರಾದ ಗ್ರಂಥಾಲಯಗಳ ಸಂಖ್ಯೆ ಎಷ್ಟು ; ಈ ಯೋಜನೆಗಳ ಮೊತ್ತವೆಷ್ಟು ; ಹಾಲಿ ಎಷ್ಟು ಗ್ರಂಥಾಲಯಗಳು ಈ ಯೋಜನೆಯಡಿ ಪೂರ್ಣಗೊಂಡಿರುತ್ತದೆ ; ಬಾಕಿ ಇರುವ ಗ್ರಂಥಾಲಯಗಳ ಕಾಮಗಾರಿ ವಿವರ ನೀಡುವುದು ;

ಆ) 2003–04ನೇ ಸಾಲಿನಲ್ಲಿ ಡಾ: ರಾಜಾರಾಂ ಮೋಹನ್‌ರಾಯ್ ಗ್ರಂಥಾಲಯ ಯೋಜನೆಯಡಿಯಲ್ಲಿ ಆಯ್ಕೆ ಮಾಡಲಾದ ಗ್ರಂಥಾಲಯಗಳ ಸಂಖ್ಯೆ ಎಷ್ಟು ; ಈ ಯೋಜನೆಯ ಉದ್ದೇಶದ ಮೊತ್ತವೆಷ್ಟು ; ಕೇಂದ್ರ ಹಾಗೂ ರಾಜ್ಯ ಸರ್ಕಾರದ ವತಿಯಿಂದ ಬಿಡುಗಡೆಯಾಗಿರುವ ಅನುದಾನದ ಮೊತ್ತವೆಷ್ಟು ;

ಇ) ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಕೇಂದ್ರ ಗ್ರಂಥಾಲಯ ಹಾಗೂ ಇತರೆ ಗ್ರಂಥಾಲಯಗಳಿಗೆ ಪುಸ್ತಕ ಹಾಗೂ ಇನ್ನಿತರ ಪೂರಕ ಸಾಮಗ್ರಿಗಳಿಗೆ 1999ರಿಂದ ಈವರೆಗೆ ವ್ಯಯಿಸಲಾದ ಹಣದ ಮೊತ್ತವೆಷ್ಟು ;

ಈ) ಶಿವಮೊಗ್ಗ ಜಿಲ್ಲಾ ಕೇಂದ್ರ ಗ್ರಂಥಾಲಯದ ಆಧುನೀಕರಣದ ಯೋಜನೆ ಸರ್ಕಾರದ ಪ್ರಸ್ತಾವನೆಯಲ್ಲಿದೆಯೇ ?

ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮೂರು ಗ್ರಾಮ ಪಂಚಾಯಿತಿ ಗ್ರಂಥಾಲಯಗಳು ಹಾಗೂ ಎರಡು ಶಾಖಾ ಗ್ರಂಥಾಲಯಗಳು ಮಂಜೂರಾಗಿರುತ್ತದೆ.

ರೂ. 21.80 ಲಕ್ಷಗಳು

ಈ ಯೋಜನೆ ಅಡಿಯಲ್ಲಿ 3 ಗ್ರಂಥಾಲಯಗಳ ಕಾಮಗಾರಿ ಪೂರ್ಣಗೊಂಡಿದ್ದು, ಒಂದು ಗ್ರಂಥಾಲಯದ ಕಾಮಗಾರಿಯನ್ನು ಕರ್ನಾಟಕ ಭೂಸೇನಾ ನಿಗಮಕ್ಕೆ ವಹಿಸಿದ್ದು, ಕಾಮಗಾರಿ ಪ್ರಾರಂಭದ ಹಂತದಲ್ಲಿದೆ. ಉಳಿದ ಒಂದು ಗ್ರಂಥಾಲಯಕ್ಕೆ ಗ್ರಾಮ ಪಂಚಾಯಿತಿಯವರು ನಿವೇಶನ ಒದಗಿಸಿದ ಕೂಡಲೇ ಗ್ರಂಥಾಲಯ ಕಟ್ಟಡದ ನಿರ್ಮಾಣ ಪ್ರಕ್ರಿಯೆ ಪ್ರಾರಂಭಿಸಲಾಗುವುದು.

ಆ) ಶಿವಮೊಗ್ಗ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆ ಇರುವುದಿಲ್ಲ.

ಇ) 1999 ರಿಂದ 31–3–2003ರವರೆಗೆ ವ್ಯಯಿಸಲಾದ ಮೊತ್ತ

	ರೂ. ಲಕ್ಷಗಳಲ್ಲಿ
1) ಪುಸ್ತಕಗಳಿಗೆ	21.51
2) ಇನ್ನಿತರ ಸಾಮಗ್ರಿಗಳಿಗೆ	2.69

ಈ) ಪರಿಶೀಲನೆಯಲ್ಲಿದೆ

ಶಿವಮೊಗ್ಗ ನಗರದ ಕೊಳಚೆ ಪ್ರದೇಶಗಳ ಮನೆಗಳಿಗೆ ಹಕ್ಕುಪತ್ರ ನೀಡಲು ನಿಯಮ ರೂಪಿಸುವುದು

3527(3339) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ರೆವಿನ್ಯೂ ಭೂಮಿ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಭೂ ಪ್ರದೇಶದಲ್ಲಿ ಘೋಷಿತವಾಗಿರುವ ಕೊಳಚೆ ಪ್ರದೇಶಗಳ ನಿವಾಸಿಗಳ ಮನೆಗಳಿಗೆ ಹಕ್ಕುಪತ್ರ ನೀಡುವ ಸಲುವಾಗಿ ಕರ್ನಾಟಕ ಕೊಳಚೆ ನಿರ್ಮೂಲನ (ಅಭಿವೃದ್ಧಿ) ಕಾಯಿದೆಗೆ ತಿದ್ದುಪಡಿ ತರಲಾಗಿದೆಯೇ ; ಹಕ್ಕುಪತ್ರ ವಿತರಿಸಲು ನಿಯಮ ರೂಪಿಸಲಾಗಿದೆಯೆ ;

ಆ) ಮೇಲ್ಕಂಡ ಸರ್ಕಾರಿ ಹಾಗೂ ಸ್ಥಳೀಯ ಸಂಸ್ಥೆಗಳ ಭೂ ಪ್ರದೇಶದಲ್ಲಿ ಇರುವ ಕೊಳಗೇರಿ ನಿವಾಸಿಗಳ ಮನೆಗಳಿಗೆ ಹಕ್ಕುಪತ್ರ ವಿತರಿಸಲು ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು ;

ಇ) ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿ ಖಾಸಗಿ ಒಡೆತನದ ಭೂ ಪ್ರದೇಶದಲ್ಲಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು ;

ಈ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಕಾಯಿದೆಯ ಕಲಂ–17ರ ರೀತ್ಯಾ ಎಷ್ಟು ಖಾಸಗಿ ಭೂಮಿಯನ್ನು ಶಿವಮೊಗ್ಗ ನಗರದಲ್ಲಿ ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ :

ಉ) ಈ ಕಾಯಿದೆಯಡಿಯಲ್ಲಿ ನಿಗಧಿಪಡಿಸಿರುವ ಭೂ ಪರಿಹಾರ ನಿಯಮಕ್ಕೆ ತಿದ್ದುಪಡಿ ತರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ (ವಿವರ ನೀಡುವುದು) ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು):

ಅ) ಹೌದು, ರೂಪಿಸಲಾಗುತ್ತಿದೆ.

ಆ) ನಿಯಮಗಳು ಜಾರಿಯಾದ ಕೂಡಲೇ ಹಕ್ಕುಪತ್ರ ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ಇ) 15 ಕೊಳಚೆ ಪ್ರದೇಶಗಳು

ಈ) ಶಿವಮೊಗ್ಗ ನಗರದಲ್ಲಿ ಖಾಸಗಿ ಒಡೆತನಕ್ಕೆ ಸೇರಿದ ಕೆಳಕಂಡ 3 ಕೊಳಚೆ ಪ್ರದೇಶಗಳ ಪೈಕಿ ಕ್ರಮ ಸಂಖ್ಯೆ 1 ಮತ್ತು 2 ರ ಕೊಳಚೆ ಪ್ರದೇಶಗಳನ್ನು ಕಲಂ 17ರ ಅಡಿಯಲ್ಲಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ.